ಓ ಎಸ್ ನಂ.**26/2026**
ಪಿ ಡಬ್ಲ್ಯೂ-**1**

ದಿನಾಂಕ **19-06-2026** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು**.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಡಿ ಎನ್ ಬಿ ವಕೀಲರವರಿಂದ.**

1. ಗೀತಾ ಅವರ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ.1 ಎಂದು ಗುರುತಿಸಲಾಯಿತು.

2. 10 ನೇ ತರಗತಿಯ ಅಂಕಪಟ್ಟಿಯನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ.2 ಎಂದು ಗುರುತಿಸಲಾಯಿತು.

3. ಆಧಾರ ಕಾರ್ಡನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ.3 ಎಂದು ಗುರುತಿಸಲಾಯಿತು.

4. ಹೂವಪ್ಪ ಅವರ ಆಧಾರ ಕಾರ್ಡನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ.4 ಎಂದು ಗುರುತಿಸಲಾಯಿತು.

5. ಕುಟುಂಬ ಪಡಿತರ ಚೀಟಿಯನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ.5 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿ ಪರವಾಗಿ ಎರಡನೇ ಎಡಿಜಿಪಿ ರವರಿಂದ**

1. ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ನನ್ನ ಮಗಳ ಅಂಕಪಟ್ಟಿಯಲ್ಲಿ ಅಡ್ಡ ಹೆಸರು ತಪ್ಪಾದ ಕಾರಣ ಸರಿ ಪಡಿಸಲು ಈ ದಾವೆಯನ್ನು ಹಾಕಿರುತ್ತೇನೆ. ಈಗ ನನ್ನ ಮಗಳು ಸೆಕೆಂಡ್ ಪಿ ಯು ಸಿ ಓದುತ್ತಿದ್ದಾಳೆ. ನಾನು ಶಾಲೆ ಕಲಿತಿರುವುದಿಲ್ಲ. ಶಾಲೆಯಲ್ಲಿ ನಾನು ಹೇಗೆ ಅರ್ಜಿಯನ್ನು ಕೊಟ್ಟಿರುತ್ತೇನೆ ಹಾಗೆಯೇ ಮಗುವಿನ ಪ್ರವೇಶವನ್ನು ತೆಗೆದುಕೊಂಡಿದ್ದರು ಎಂದರೆ ಸರಿ. 10 ನೇ ತರಗತಿಯ ಪರೀಕ್ಷಾ ಅರ್ಜಿಯನ್ನು ನಾನೇ ತುಂಬಿಸಿಕೊಟ್ಟಿರುತ್ತೇನೆ ಎಂದರೆ ಸರಿ.

ಅದೇ ರೀತಿಯಾಗಿ ಮಾರ್ಕ್ಸ್ ಕಾರ್ಡ ಬಂದಿರುತ್ತದೆ ಎಂದರೆ ಸರಿ. ಪರೀಕ್ಷಾ ಅರ್ಜಿಯನ್ನು ನನ್ನ ಮಗಳು ತುಂಬಿರುತ್ತಾಳೆ. ಆಂಗ್ಲ ಭಾಷೆಯಲ್ಲಿ ಶಂಭು ನಂತರ ಯು ಅಕ್ಷರ ಬರುತ್ತದೆ ಎಂದು ತೋರಿಸಲು ಮಗಳ ಆಧಾರ ಕಾರ್ಡ ಮತ್ತು ನನ್ನ ಆಧಾರ ಕಾರ್ಡ ಹಾಜರು ಪಡಿಸಿರುತ್ತೇನೆ. ನನಗೆ ನಾಲ್ಕು ಜನ ಮಕ್ಕಳು. ಗೀತಾ ನನ್ನ ದೊಡ್ಡ ಮಗಳು. ಉಳಿದವರು ಆಕೆಗಿಂತ ಚಿಕ್ಕವರು.

2. 10 ನೇ ತರಗತಿಯ ಮಾರ್ಕ್ಸ್ ಕಾರ್ಡ ಬಂದ ತಕ್ಷಣ ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ಇರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ತಿದ್ದುಪಡಿ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ನಿಮ್ಮ ನಿರ್ಲಕ್ಷತನದಿಂದ ತಪ್ಪಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.